Online Newspaper Clipping Service

**Dated, Saturday 18th February – 2017**

ಪ್ರಜಾವಾಣಿ

Pg.No.03

ಎಸ್‌ಡಿಯುಎಎಚ್‌ಇಆರ್ ಕಾರ್ಯದರ್ಶಿ ನಾಗರಾಜ್ ಅಭಿಪ್ರಾಯ

# ಮೊಬೈಲ್ ಮೋಹ ಪಾಶದಲ್ಲಿ ಯುವಪೀಳಿಗೆ

ಪ್ರಜಾವಾಣಿ ವಾರ್ತೆ

ಕೋಲಾರ: 'ಮೊಬೈಲ್ ಮೋಹ ಪಾಶಕ್ಕೆ ಸಿಲುಕಿರುವ ಯುವಪೀಳಿಗೆಯನ್ನು ಓದಿನತ್ತ ಸೆಳೆಯುವ ಕೆಲಸ ಆಗಬೇಕು' ಎಂದು ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಅಭಿಪ್ರಾಯಪಟ್ಟರು.

ಕರ್ನಾಟಕ ಆರೋಗ್ಯ ವಿಜ್ಞಾನ ಗ್ರಂಥಾಲಯಗಳ ಸಂಘ (ಕೆಎಚ್‌ಎಸ್‌ಎಲ್‌ಎ) ಹಾಗೂ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಸಹಯೋಗದಲ್ಲಿ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಓಪನ್ ಸೋರ್ಸ್ ಸಾಫ್ಟ್‌ವೇರ್ ಅಂಡ್ ಓಪನ್ ಆಕ್ಸೆಸ್ ಸೈಂಟಿಫಿಕ್ ಲಿಟರೇಚರ್ ಫಾರ್ ಹೆಲ್ತ್ ಸೈನ್ಸ್ ಲೈಬ್ರರೀಸ್ ವಿಷಯ ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದರು.

ಹಲವು ಮಹನೀಯರು ಗ್ರಂಥಾಲಯದಲ್ಲಿನ ಪುಸ್ತಕಗಳನ್ನು ಓದಿ ಸಮಾಜಕ್ಕೆ ಅನನ್ಯ ಕೊಡುಗೆ ನೀಡಿದ್ದಾರೆ. ಅಲ್ಲದೇ, ಸಮಾಜದ ಅಭಿವೃದ್ಧಿಗೆ ಪೂರಕವಾಗಿ ಪುಸ್ತಕಗಳನ್ನು ರಚಿಸಿದ್ದಾರೆ. ವಿದ್ಯಾರ್ಥಿಗಳು ಇಂತಹ ಮಹನೀಯರ ಪುಸ್ತಕಗಳನ್ನು ಓದಿ ಜ್ಞಾನ ಭಂಡಾರ ಹೆಚ್ಚಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮಧ್ಯಕಾಲೀನ ಯುಗದಲ್ಲಿ ತಂತ್ರಜ್ಞಾನ ಅಭಿವೃದ್ಧಿಯಾಗಿರದ ಕಾರಣ ಮಹನೀಯರು ಪುಸ್ತಕಗಳಿಂದ ಪ್ರಭಾವಿತರಾಗಿ ಓದಿನ ಮೂಲಕ ಜ್ಞಾನ ಸಂಪಾದಿಸಿದರು. ಈ ಹಿಂದೆ ರಚನೆಯಾಗಿರುವ ಪುಸ್ತಕಗಳು ಅಪಾರ ಜ್ಞಾನ ಸಂಪತ್ತು ಹೊಂದಿವೆ. ಇಂಟರ್‌ನೆಟ್‌ನಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಮಾಹಿತಿ ಸಿಗುತ್ತದೆ. ಯುವ ಪೀಳಿಗೆಯು ಇಂಟರ್‌ನೆಟ್‌ನಿಂದಲೇ ಸಾಕಷ್ಟು ಮಾಹಿತಿ ಪಡೆಯುತ್ತಿದೆ. ಇಂಟರ್‌ನೆಟ್‌ಗಿಂತ ಗ್ರಂಥಾಲಯಗಳಲ್ಲಿನ ಪುಸ್ತಕಗಳಿಂದ ಹೆಚ್ಚಿನ ಮಾಹಿತಿ ಸಂಗ್ರಹಿಸಬಹುದು ಎಂದರು.

ಟಿ.ವಿ, ಇಂಟರ್‌ನೆಟ್, ರೇಡಿಯೊ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಮಕ್ಕಳಲ್ಲಿ ಜ್ಞಾನ ಹೆಚ್ಚಿಸಲು ಸಾಧ್ಯವಿಲ್ಲ. ಬದಲಿಗೆ ಇವುಗಳಿಂದ ಸಮಯ ವ್ಯರ್ಥವಾಗುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಇದರಿಂದ ಜ್ಞಾನ ವಿಸ್ತಾರವಾಗಿ ಭವಿಷ್ಯ ಉಜ್ವಲವಾಗುತ್ತದೆ ಎಂದರು.

**ಹೃದಯವಿದ್ದಂತೆ:** ಕೆಎಚ್‌ಎಸ್‌ಎಲ್‌ಎ ಅಧ್ಯಕ್ಷ ಪಿ.ಎಸ್.ಮಹೇಶ್ ಮಾತನಾಡಿ, 'ಶಾಲಾ ಕಾಲೇಜುಗಳಿಗೆ ಗ್ರಂಥಾಲಯ ಹೃದಯ ಭಾಗವಿದ್ದಂತೆ. ವಿದ್ಯಾರ್ಥಿಗಳಿಗೆ ಪುಸ್ತಕಗಳ ಅಗತ್ಯ ಹೆಚ್ಚಿದ್ದು, ಪ್ರತಿ ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಗ್ರಂಥಾಲಯ ಸ್ಥಾಪಿಸುವ ಮೂಲಕ ಮಕ್ಕಳನ್ನು ಓದಿನತ್ತ ಸೆಳೆಯುವುದು ಶಿಕ್ಷಕರ ಜವಾಬ್ದಾರಿ' ಎಂದರು.

ಅನುಭವಿ ಗ್ರಂಥಪಾಲಕ ಪ್ರಾಧ್ಯಾಪಕರು ಕಾರ್ಯಾಗಾರದಲ್ಲಿ ವಿಶೇಷ ಉಪನ್ಯಾಸ ನೀಡಿದರು. ರಾಜ್ಯದ ವಿವಿಧ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಗ್ರಂಥಪಾಲಕರು ಪಾಲ್ಗೊಂಡಿದ್ದು, ಶನಿವಾರ (ಫೆ.18) ಕಾರ್ಯಾಗಾರ ಮುಕ್ತಾಯಗೊಳ್ಳಲಿದೆ.

ಕೆಎಚ್‌ಎಸ್‌ಎಲ್‌ಎ ಕಾರ್ಯದರ್ಶಿ ಡಾ.ವೆಂಕಟೇಶ್, ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಕುಲಪತಿ ಡಾ.ಸಿ.ವಿ.ರಘುವೀರ್, ನಿರ್ದೇಶಕ ಜೆ.ರಾಜೇಂದ್ರ, ಕುಲಸಚಿವ ಡಾ.ಎ.ವಿ.ಎಂ ಕುಟ್ಟಿ, ಪ್ರಾಂಶುಪಾಲ ಡಾ.ಎಂ.ಎಲ್.ಹರೇಂದ್ರಕುಮಾರ್, ಗ್ರಂಥಪಾಲಕ ಪ್ರಕಾಶ್ ಮೊದಲ ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.



ಕೋಲಾರದಲ್ಲಿ ಶುಕ್ರವಾರ ನಡೆದ ಓಪನ್ ಸೋರ್ಸ್ ಸಾಫ್ಟ್‌ವೇರ್ ಅಂಡ್ ಓಪನ್ ಆಕ್ಸೆಸ್ ಸೈಂಟಿಫಿಕ್ ಲಿಟರೇಚರ್ ಫಾರ್ ಹೆಲ್ತ್ ಸೈನ್ಸ್ ಲೈಬ್ರರೀಸ್ ವಿಷಯ ಕುರಿತ ಕಾರ್ಯಾಗಾರದಲ್ಲಿ ರಾಜ್ಯದ ವಿವಿಧ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಗ್ರಂಥಪಾಲಕರು ಪಾಲ್ಗೊಂಡಿದ್ದರು

**ಮುಖ್ಯಾಂಶಗಳು**

- ಓದುವ ಹವ್ಯಾಸ ಬೆಳೆಸಿಕೊಳ್ಳಿ
- ಜ್ಞಾನ ಭಂಡಾರ ಹೆಚ್ಚಿಸಿಕೊಳ್ಳಿ
- ಪುಸ್ತಕಗಳಿಂದ ಹೆಚ್ಚಿನ ಮಾಹಿತಿ

ವಿಜಯ ಕರ್ನಾಟಕ

Pg.No.11

# ಯುವಜನತೆಯ ಗಮನ ಪುಸ್ತಕದತ್ತ ಸೆಳೆಯುವ ಕೆಲಸವಾಗಬೇಕು

■ ವಿಕ ಸುದ್ದಿಲೋಕ ಕೋಲಾರ

ಮೊಬೈಲ್ ವ್ಯಾಮೋಹಕ್ಕೆ ಒಳಗಾಗಿರುವ ಯುವಕರನ್ನು ಪುಸ್ತಕ ಓದುವುದರ ಕಡೆ ಗಮನ ಸೆಳೆಯುವ ಕೆಲಸ ಆಗಬೇಕಾಗಿದೆ ಎಂದು ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಅಭಿಪ್ರಾಯಪಟ್ಟರು.

ನಗರ ಹೊರವಲಯದ ದೇವರಾಜ್ ಅರಸ್ ಉನ್ನತ ಶಿಕ್ಷಣ ಮತ್ತು ವೈದ್ಯಕೀಯ ಸಂಶೋಧನೆ ಕಾಲೇಜಿನ ಆಶ್ರಯದಲ್ಲಿ ಶುಕ್ರವಾರದ ಹಮ್ಮಿಕೊಂಡಿದ್ದ ಓಪನ್ ಸೋರ್ಸ್ ಸಾಫ್ಟ್‌ವೇರ್ ಮತ್ತು ಲಿಟ್ರೇಚರ್ ಹೆಲ್ತ್ ಸೈನ್ಸ್ ಲೈಬ್ರರೀಸ್ ಎಂಬ ವಿಷಯದ ಕುರಿತು ನಡೆದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಈ ಹಿಂದೆ ಅನೇಕ ಗಣ್ಯರು ಗ್ರಂಥಾಲಯದಲ್ಲಿನ ಪುಸ್ತಕಗಳನ್ನು ಓದಿಯೇ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ಜತೆಗೆ ಸಮಾಜ ಅಭಿವೃದ್ಧಿಗೆ ಪೂರಕವಾಗಿರುವ ಪುಸ್ತಕಗಳನ್ನು ರಚಿಸಿ ಸಮರ್ಪಣೆ ಮಾಡಿದ್ದಾರೆ. ಅವರು ರಚಿಸಿರುವ ಪುಸ್ತಕಗಳನ್ನು ಓದುವ ಅಭ್ಯಾಸವನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಮಧ್ಯಕಾಲಿನ ಶತಮಾನದಲ್ಲಿ ತಂತ್ರಜ್ಞಾನ ಅಭಿವೃದ್ಧಿಗೊಳ್ಳದ ವೇಳೆ ಗಣ್ಯರು ಪುಸ್ತಕಗಳಿಂದ ಪ್ರಭಾವಿತರಾದರು. ಆ ಮೂಲಕ ಅವರು ಅಂದಿನ ದಿನಗಳಲ್ಲಿ ರಚಿಸಿರುವ ಪುಸ್ತಕಗಳು ಇಂದಿಗೂ ಸಹ ಶಾಶ್ವತವಾಗಿ ಉಳಿದಿದೆ. ನಾನಾ ವಿಷಯಗಳಿಗೆ ಸಂಬಂಧಿಸಿದ ಸುದ್ದಿ ಇಂಟರ್ ನೆಟ್‌ನಲ್ಲಿ ಲಭ್ಯವಾಗುತ್ತದೆ ಎಂದು ಇತ್ತೀಚಿನ ದಿನಗಳ ಯುವಕ - ಯುವತಿಯರು ತಿಳಿದುಕೊಂಡಿದ್ದಾರೆ. ಇದಕ್ಕಿಂತ ಹೆಚ್ಚಾಗಿ ಗ್ರಂಥಾಲಯಗಳಲ್ಲಿ ಲಭ್ಯವಿರುವ ಪುಸ್ತಗಳಲ್ಲಿ ಹೆಚ್ಚು ವಿಷಯವನ್ನು ಸಂಗ್ರಹಿಸಬಹುದು ಎಂದು ತಿಳಿಸಿದರು.





ದೇವರಾಜ್ ಅರಸ್ ಉನ್ನತ ಶಿಕ್ಷಣ ಮತ್ತು ವೈದ್ಯಕೀಯ ಸಂಶೋಧನೆ ಕಾಲೇಜಿನ ಆಶ್ರಯದಲ್ಲಿ ಶುಕ್ರವಾರ ನಡೆದ ಓಪನ್ ಸೋರ್ಸ್ ಸಾಫ್ಟ್‌ವೇರ್ ಮತ್ತು ಲಿಟ್ರೇಚರ್ ಹೆಲ್ತ್ ಸೈನ್ಸ್ ಲೈಬ್ರರೀಸ್ ವಿಷಯದ ಕಾರ್ಯಾಗಾರಕ್ಕೆ ಜಿ.ಎಚ್.ನಾಗರಾಜ್ ಚಾಲನೆ ನೀಡಿದರು (ಎಡಚಿತ್ರ). ಕಾರ್ಯಾಗಾರದಲ್ಲಿ ಕಾಲೇಜಿನ ವಿದ್ಯಾರ್ಥಿಗಳು, ಸಿಬ್ಬಂದಿ ಭಾಗವಹಿಸಿದ್ದರು.

ಕೆಎಚ್‌ಎಸ್‌ಎಲ್‌ಎ ಗ್ರಂಥಾಲಯದ ಅಧ್ಯಕ್ಷ ಪಿ.ಎಸ್.ಮಹೇಶ್ ಮಾತನಾಡಿ, ದೂರ ದರ್ಶನ, ಇಂಟರ್‌ನೆಟ್, ರೇಡಿಯೋ ಮತ್ತು ಇತರೆ ಸಾಮಾಜಿಕ ಜಾಲ ತಾಣಗಳ ಮೂಲಕ ಮಕ್ಕಳಲ್ಲಿ ಜ್ಞಾನ ಹೆಚ್ಚಿಸಲು ಸಾಧ್ಯವಿಲ್ಲ. ಇವುಗಳ ಮುಂದೆ ಮಾಡುವ ಕಾಲಹರಣದಲ್ಲಿ ಗ್ರಂಥಾಲಯದಲ್ಲಿ ಪುಸ್ತಕ ಓದಿದರೆ ಜ್ಞಾನ ಭಂಡಾರ ವೃದ್ಧಿಸುವುದರ ಜತೆಗೆ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ವಿದ್ಯಾರ್ಥಿಗಳಿಗೆ ಪುಸ್ತಕಗಳ ಅವಶ್ಯಕತೆ ಹೆಚ್ಚಿದ್ದು, ಪ್ರತಿಯೊಂದು ಸರಕಾರಿ ಮತ್ತು ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವ ಮೂಲಕ ಮಕ್ಕಳನ್ನು ಪುಸ್ತಕ ಓದುವುದರ ಕಡೆ ಗಮನ ಸೆಳೆಯುವ ಕೆಲಸ ಶಿಕ್ಷಕರ ಮೇಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೆಎಚ್‌ಎಸ್‌ಎಲ್‌ಎ ಕಾರ್ಯದರ್ಶಿ ಡಾ.ವೆಂಕಟೇಶ್, ದೇವರಾಜ್ ಅರಸ್ ಉನ್ನತ ಶಿಕ್ಷಣ ಸಂಶೋಧನೆ ಸಂಸ್ಥೆಯ ಕುಲಪತಿ ಡಾ.ಸಿ.ವಿ.ರಘುವೀರ್, ನಿರ್ದೇಶಕ ಜೆ.ರಾಜೇಂದ್ರ, ಕುಲಸಚಿವ ಡಾ.ಎ.ವಿ.ಎಂ.ಕುಟ್ಟಿ, ಪ್ರಿನ್ಸಿಪಾಲ್ ಡಾ.ಎಂ.ಎಲ್. ಹರೇಂದ್ರಕುಮಾರ್, ಗ್ರಂಥಪಾಲಕ ಪ್ರಕಾಶ್ ಉಪಸ್ಥಿತರಿದ್ದರು.

ಕೋಲಾರಪತ್ರಿಕೆ



# ಒತ್ತಡ ದೂರವಿರಿಸಿ, ಮನೋಲ್ಲಾಸಕ್ಕಾಗಿ ಗ್ರಂಥಾಲಯ ಬಳಸಿ: ಸಿದ್ಧಮಲ್ಲಯ್ಯ ಕರೆ



ಕೋಲಾರ ಫೆ ೧೭.

ನಿತ್ಯದ ಒತ್ತಡದ ಕೆಲಸ ಕಾರ್ಯಗಳ ನಡುವೆ ಮನಸ್ಸನ್ನು ಉಲ್ಲಾಸವಾಗಿಡುವ ಗ್ರಂಥಾಲಯಗಳ ಬಳಕೆ ಮಾಡಿಕೊಳ್ಳಬೇಕೆಂದೂ, ಆಧುನಿಕ ತಂತ್ರಜ್ಞಾನಗಳಿಂದ ದೊರೆಯುವ ಮಾಹಿತಿಗಿಂತಲೂ ಮುದ್ರಿತ ಸಾಹಿತ್ಯದಲ್ಲೇ ಉತ್ತಮ ಗುಣಮಟ್ಟದ ಮಾಹಿತಿ ಲಭಿಸುವುದೆಂದೂ ಡಾ॥ ಎಸ್.ಎಸ್. ಸಿದ್ಧಮಲ್ಲಯ್ಯ ಪ್ರತಿಪಾದಿಸಿದರು.

ಅವರು ಟಿಮಕದ ದೇವರಾಜು ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯಲ್ಲಿ ನಡೆದ ರಾಜ್ಯ

ಗ್ರಂಥಾಲಯಗಳಲ್ಲಿ ಹಿಂದೆ ಏಕಾಂಗಿಯಾಗಿ ಕುಳಿತು ನಿಶ್ಶಬ್ದ ವಾತಾವರಣದಲ್ಲಿ ಓದುತ್ತಿದ್ದ ಕಾಲ ಬದಲಾಗಿ ಕಂಪ್ಯೂಟರ್, ಅಂತರ್ಜಾಲ ಬಳಕೆ, ಗುಂಪು ಚರ್ಚೆಯ ಮೂಲಕ ಮಾಹಿತಿ ವಿನಿಮಯ ನಡೆಯುತ್ತಿದೆ. ವೈದ್ಯಕೀಯ ಮಾಹಿತಿಯ ಪ್ರತಿಶತ ೩೩ರಷ್ಟು ಮುಕ್ತವಾಗಿ ದೊರೆಯುತ್ತಿದ್ದರೂ ಗ್ರಂಥಾಲಯ ಮತ್ತು ಓದುಗ ನಡುವಣ ಸಂವಹನ ಕೊರತೆಯಿಂದ ಗ್ರಂಥಾಲಯಗಳ ಪೂರ್ಣ ಪ್ರಮಾಣದ ಬಳಕೆ ಸಾಧ್ಯವಾಗಿಲ್ಲವೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ದೇವ

ರುವುದರಿಂದ ಗ್ರಂಥಾಲಯಗಳಿಗೆ ಮರುಹುಟ್ಟು ದೊರೆತಿದೆ. ಡಿಜಿಟಲ್ ಮಾಹಿತಿ ಜೊತೆಗೆ ಮುದ್ರಿತ ಮಾಹಿತಿಯೂ ಲಭ್ಯವಿರಬೇಕೆಂದು ಹೇಳಿದರು.

ದೇವರಾಜ ಅರಸು ವಿ.ವಿ.ಯಲ್ಲಿ ಸದ್ಯದಲ್ಲಿ ಏಕಕಾಲಕ್ಕೆ ೧೩ ಶಸ್ತ್ರಚಿಕಿತ್ಸೆ ಮಾಡುವ ಸೌಕರ್ಯಗಳುಳ್ಳ ನೂತನ ಕಟ್ಟಡ, ಆಹಾರ ಕೋರ್ಟ್, ಇ-ಸಂಪನ್ಮೂಲ ಸಹಿತ ಗ್ರಂಥಾಲಯ, ಡಯಾಗ್ನೋಸ್ಟಿಕ್ ಲ್ಯಾಬ್‌ಗಳು ತಲೆಯೆತ್ತಲಿವೆಯೆಂದು ಅವರು ತಿಳಿಸಿದರು.

ರಾಜ್ಯ ಆರೋಗ್ಯ ವಿಜ್ಞಾನಗಳ ಗ್ರಂಥಾಲಯ ಸಂಘದ

ಕೋಲಾರಪತ್ರಿಕೆ



ಆರೋಗ್ಯ ವಿಜ್ಞಾನಗಳ ಗ್ರಂಥಾಲಯ ಸಂಸ್ಥೆಯ ೯ನೇ ವಾರ್ಷಿಕ ಸಮಾವೇಶದ ಪ್ರಧಾನ ಭಾಷಣ ಮಾಡುತ್ತಿದ್ದರು.

ರಾಜ ಅರಸು ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಹೆ.ಎಚ್. ನಾಗರಾಜ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಗ್ರಂಥಾಲಯ ಯಾವುದೇ ಸಂಸ್ಥೆಯ ಜೀವನಾಡಿಯಿದ್ದ ಹಾಗೆ. ಪುಸ್ತಕ ಪ್ರೀತಿಯಿಂದ ಜ್ಞಾನದ ವರ್ಗಾವಣೆಯಾಗುವುದನ್ನು ಮುಂದುವರೆಸಿಕೊಂಡು ಹೋಗಬೇಕು. ಆದರೆ ನವಪೀಳಿಗೆಯವರು ಟಿವಿ,ಮೊಬೈಲ್‌ಗಳ ಪ್ರಭಾವದಿಂದ ಪುಸ್ತಕ ಓದುವುದು ಕಡಮೆಯಾಗುತ್ತಿದೆ. ಈ ಸ್ಥಿತಿ ಬದಲಾಗಿ ಎಲ್ಲ ವಿಷಯಗಳ ಅರಿವಿಗೆ ಗ್ರಂಥಾಲಯ ಬಳಸುವ ಸಂಕಲ್ಪ ಮಾಡಬೇಕು ಎಂದರು.

ಮುಖ್ಯ ಅತಿಥಿಯಾಗಿದ್ದ ಅರಸು ವೈದ್ಯಕೀಯ ವಿ.ವಿ. ಉಪಕುಲಪತಿ ಡಾ॥ ಸಿ.ವಿ. ರಘುವೀರ್ ಅವರು ಯಾವುದೇ ರೀತಿಯ ವಿಜ್ಞಾನ ಸಾಹಿತ್ಯ ಪಡೆಯುವುದು ಸುಲಭ ಸಾಧ್ಯವಾಗಿ

ಅಧ್ಯಕ್ಷ ಡಾ॥ಪಿ.ಎಸ್. ಮಹೇಶ್ ೧೯೯೮ರಲ್ಲಿ ಶುರುವಾದ್ದಕೂ ೨೦೦೮ರವರೆಗೆ ಪ್ರಬುದ್ಧವಾಗಿದ್ದ ಸಂಘ ೨೦೦೮ರಿಂದ ಸಕ್ರಿಯವಾಗಿ ಸದಸ್ಯತ್ವ ಹೇರು ಬಂದ ವಾಳ ವೃದ್ಧಿಸಿಕೊಂಡು ಪ್ರಚಲಿತ ವಿದ್ಯಮಾನಗಳ ಬಗ್ಗೆ ಚಿಂತಿಸಿ, ಗ್ರಂಥಪಾಲಕರು ಓದುಗರಿಗೆ ನೆರವಾಗುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆಯೆಂದರು.

ಅರಸು ಶಿಕ್ಷಣ ಸಂಸ್ಥೆ ಟ್ರಸ್ಟಿ ಜೆ. ರಾಜೇಂದ್ರ, ರಿಜಿಸ್ಟ್ರಾರ್ ಡಾ॥ ಎ.ವಿ.ಎಂ. ಕುಟ್ಟಿ, ಹಿರಿಯ ಗ್ರಂಥಪಾಲಕ ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು

ಕೃತಿಕಾ-ಹರಿಣಿಯಿಂದ ಪ್ರಾರ್ಥನೆ, ಪ್ರಾಂಶುಪಾಲ ಡಾ॥ ಎಂ.ಎಲ್. ಹರೇಂದ್ರ ಕುಮಾರ್‌ರಿಂದ ಸ್ವಾಗತ, ಡಾ॥ ವೆಂಕಟೇಶ್‌ರಿಂದ ವರದಿವಾಚನ, ಡಾ॥ ಕಾರ್ತಿಂಯಾನಿ ಕುಟ್ಟಿರಿಂದ ಅತಿಥಿಪರಿಚಯ, ಪ್ರಕಾಶ್‌ರಿಂದ ವಂದನೆಗಳಾಯಿತು.